Impact Factor (SJIF): 6.126 E-ISSN: 2583-1615, P-ISSN: 3049-3498

International Journal of Research in Academic World

Received: 11/March/2025 IJRAW: 2025; 4(4):238-241 Accepted: 17/April/2025

# ಡಾ.ಬಿ.ಆರ್ ಅಂಬೇಡ್ಕರ್ ಭಾಷಣಗಳು ಮತ್ತು ಅಸ್ಪೃಶ್ಯ ವಿದ್ಯಾರ್ಥಿ ಯುವ ಸಮುದಾಯ

*[1]ಪ್ರಕಾಶ. ಬಿ

*[1]ಸಹಾಯಕ ಪ್ರಾಧ್ಯಾಪಕರು, ಕನ್ನಡ ಇಲಾಖ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿರಸಿ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, ಕರ್ನಾಟಕ, ಭಾರತ.

**ಸಾರಾಂಶ**

ಡಾ.ಬಿ.ಆರ್.ಅಂಬೇಡ್ಕರ್ ಅವರು ಕರ್ನಾಟಕದ ವಿವಿಧ ಸ್ಥಳಗಳಲ್ಲಿ ಮಾಡಿರುವ ಭಾಷಣಗಳು ಅಸ್ಪೃಶ್ಯ ವಿದ್ಯಾಥಿ ಯುವ ಸಮುದಾಯವನ್ನು ಹೇಳಿರುವ ಮಾತುಗಳನ್ನು ಸಂಗ್ರಹಿಸಿ ಇಲ್ಲಿ ತಿಳಿಸಲಾಗಿದೆ. 1ಕೇವಲ ಶಿಕ್ಷಣವನ್ನು ಪಡೆದ ಮಾತ್ರಕ್ಕೆ ಆ ಯೋಗ್ಯತೆ ಬರುವುದೆಂದು ನಾನು ಭಾವಿಸುವುದಿಲ್ಲ.ಮನುಷ್ಯನು ವಿದ್ಯಾವಂತನಾಗಿ ಸಮಾಜಕ್ಕೆ ಉಪಯುಕ್ತನಾಗುತ್ತಾನೆ ಎಂದೇನೂ ಇಲ್ಲ. ಅವನಲ್ಲಿ ನೀಚತನ, ಸುಳ್ಳು ಹೇಳುವುದು. ಜಗಳವಾಡುವುದು ಇತ್ಯಾದಿ ದುರ್ಗುಣಗಳಿವೆ.ಇಂದಿನ ಪರಿಸ್ಥಿತಿಯಲ್ಲಿ ಮೇಲ್ವರ್ಗದ ವಿದ್ವಾಂಸರು ಅಸ್ಪೃಶ್ಯರನ್ನು ಹೇಗೆ ನಡೆಸಿಕೊಳ್ಳುತ್ತಿದ್ದಾರೆ ಎಂಬುದನ್ನು ನಾವು ನೋಡುತ್ತಿದ್ದೇವೆ. ಇದು ನಡೆಯುತ್ತಲೇ ಇರುವುದಕ್ಕೆ ಕಾರಣ, ಸ್ಪೃಶ್ಯಾಸ್ಪೃಶ್ಯ ಸಮಸ್ಯೆ ಕಾಲಾತೀತವಾಗಿದೆ ಮತ್ತು ಇದು ಯಾವಾಗ ಕೊನೆಗೊಳ್ಳುತ್ತದೆ ಎಂದು ಯಾರೂ ಎದೆತಟ್ಟಿ ಹೇಳಲು ಸಾಧ್ಯವಿಲ್ಲ. ಅಸ್ಪೃಶ್ಯತೆಯ ನಿವಾರಣೆಗೆ ಹಲವು ಮಾರ್ಗಗಳಿವೆ. ಅವುಗಳಲ್ಲಿ ಮಹತ್ವದ್ದೆಂದರೆ ರಾಜಕೀಯ ಅಧಿಕಾರವನ್ನು ನಿಮ್ಮ ಕೈಗೆ ತೆಗೆದುಕೊಳ್ಳುವುದೇ ಆಗಿದೆ. 2ಇತ್ತೀಚೆಗೆ ನಿಮ್ಮ ಸುಧಾರಣೆಗಾಗಿ ಅನೇಕ ಸ್ಪೃಶ್ಯರು ಜನರು ಮುಂದೆ ಬರುತ್ತಿದ್ದಾರೆ. ಅಧಿಕಾರಿಗಳು ಸಹಿತ ನಿಮಗೆ ಸಹಾನುಭೂತಿ ತೋರಿಸುತ್ತಾರೆ. ನಿಧಾನವಾಗಿ ಅವರು ಹೇಳುತ್ತಾರೆ ನಿಮ್ಮ ನಡೆನುಡಿ ಸುಧಾರಿಸಿಕೊಳ್ಳಿ, ಸ್ವಚ್ಛವಾಗಿರಿ. ಹೊಸ ದೃಷ್ಟಿಕೋನವನ್ನು ಹೊಂದಿರಿ ಎಂದು. ಅವರು ಹೀಗೆ ಹೇಳುವುದು ತಪ್ಪಲ್ಲ. ಆದರೆ ನೆನಪಿಡಿ. ಇವೆಲ್ಲವೂ ರಾಜಕೀಯ ಅಧಿಕಾರಕ್ಕೆ ಒಳಪಟ್ಟಿವೆ.ಸರಕಾರವು ಅಸ್ಪೃಶೋದ್ಧಾರದ ವಿಚಾರದಲ್ಲಿ ಕಾನೂನು ರೂಪಿಸುವ ಎದೆಗಾರಿಕೆಯನ್ನು ತೋರುತ್ತಿಲ್ಲ. ಮೇಲ್ಜಾತಿಗಳ ಕೋಪವನ್ನು ತನ್ನ ಮೇಲೆ ಸೆಳೆದುಕೊಳ್ಳುವ ಇಚ್ಛೆ ಅದಕ್ಕಿಲ್ಲ.ರಾಜಕೀಯ ಅಧಿಕಾರದ ನಮ್ಮ ಕೈಗೆ ಬಾರದ ಹೊರತು ನಮ್ಮ ಸುಧಾರಣೆಗೆ ನಿಜವಾದ ಬಲ ಸಿಕ್ಕುವುದಿಲ್ಲ.ನಾವು ರಾಜಕೀಯ ಅಧಿಕಾರ ಹಿಡಿಯಲು ಶ್ರಮಿಸುವುದರ ಜೊತೆಗೇ ಬಲಾಢ್ಯರ ದಬ್ಬಾಳಿಕೆ ತೊಡೆಯುತ್ತಲೂ ಶ್ರಮಿಸಬೇಕು. ಕೊಂಕಣದಲ್ಲಿ ಅಸ್ಪೃಶ್ಯರ ಸ್ಥಿತಿಯು ಗ್ರಾಮಸ್ಥರ ಮರ್ಜಿಯ ಮೇಲೆ ಅವಲಂಬಿತವಾಗಿದೆ. ಗ್ರಾಮ ಪಾಟೀಲರ ಅನುಕೂಲಕ್ಕೆ ತಕ್ಕಂತೆ ನಡೆದುಕೊಳ್ಳಬೇಕು. ಇಲ್ಲವಾದರೆ ಅವರು ಅಸ್ಪೃಶ್ಯರ ಮೇಲೆ ಗೂಂಡಾಗಿರಿ ಮಾಡುತ್ತಾರೆ. ಕಠಿಣ ಸಾಮಾಜಿಕ ಬಹಿಷ್ಕಾರವನ್ನು ಹೇರಲಾಗುತ್ತದೆ. ಇಂಥ ಬಹಿಷ್ಕಾರಗಳಿಂದಾಗಿ ಅಸ್ಪೃಶ್ಯರು ಭಯಬೀಳುತ್ತಾರೆ ಮತ್ತು ಸಹಜವಾಗಿಯೇ ಪ್ರಸ್ತುತ ಚಳುವಳಿಯಿಂದ ದೂರವಿರಲು ಬಯಸುತ್ತಾರೆ. ಈ ದೇಶದಲ್ಲಿ ಮಹಾರ್ ಮಾಂಗ್ರಿಗೂ ಸ್ವರಾಜ್ಯ ಬೇಕು. ಆದರೆ ಸಧ್ಯದ ಸ್ವರಾಜ್ಯದ ಭಾನಗಡಿ ನೋಡಿದರೆ ಅದು ಇತರದ ಮಡಿಲಲ್ಲಿ ಬೀಳುತ್ತದೆ. ಸ್ವರಾಜ್ಯದಲ್ಲಿ ನಮಗೂ ಪಾಲು ಇರಬೇಕು;ಆದರೆ ಈ ಸ್ವರಾಜ್ಯ ಸಂಧಾನದಲ್ಲಿ ಅಂಥ ತಥ್ಯವಿಲ್ಲ ಎಂದು ನಾನು ಭಾವಿಸುತ್ತೇನೆ.ನನಗೆ ಬ್ರಿಟಿಷ್ ಸರ್ಕಾರದಲ್ಲಿ ನಂಬಿಕೆ ಇಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈ ಸರ್ಕಾರ ನಮ್ಮನ್ನು ಉದ್ಧಾರಕ್ಕಾಗಿ ಏನನ್ನೂ ಮಾಡಲಾರದು. ನಮ್ಮ ಉದ್ಧಾರವನ್ನು ನಾವೇ ಮಾಡಿಕೊಳ್ಳಬೇಕು. ಅಸ್ಪೃಶ್ಯತೆ ಇರುವವರೆಗೆ ಸ್ವರಾಜ್ಯವಿಲ್ಲ ಸುಲಭದಲ್ಲಿ ಈ ದೇಶದ ಸಂತೋಷಕ್ಕಾಗಿ ಯಾರೂ ಸ್ವರಾಜ್ಯವನ್ನು ನೀಡುವುದಿಲ್ಲ. ಸಧ್ಯಕ್ಕೆ ಸ್ವರಾಜ್ಯ ವಿಚಾರದಲ್ಲಿ ಮಾತುಕತೆ ನಡೆಯುತ್ತಿದೆ. ಅದರಲ್ಲಿ ನಮ್ಮನ್ನು ಯಾರಾದರೂ ಕೇಳಿದ್ದಾರೆಯೆ? ಇದಕ್ಕಾಗಿ ನಾವೀಗ ಸ್ವರಾಜ್ಯವಾದಿಗಳಾಗಬೇಕು;ಆದರೆ ಅಂಥ ಸ್ವರಾಜ್ಯ ಸಿಕ್ಕರೂ ಏನಾಗುತ್ತದೆ? ನೀವು ಸ್ವರಾಜ್ಯಕ್ಕೆ ಅರ್ಹರಾಗಬೇಕು. ಹೋರಾಟ

*Corresponding Author: ಪ್ರಕಾಶ. ಬಿ

ಹೋರಾಟದಿಂದ ನಮಗೆ ಬೇಕಾದ ಅಧಿಕಾರ ಸಿಗಬಹುದು. ಆದರೆ ಜ್ಞಾನವಿಲ್ಲದೆ ಅದು ನಿಷ್ಪಯೋಜಕವಾಗಿದೆ. ಅಸ್ಪೃಶ್ಯರು ಕೇವಲ ಬಹುಸಂಖ್ಯಾತರಂತೆ ಆಗಬೇಕಿಲ್ಲ. ಸ್ವರಾಜ್ಯವನ್ನು ಅನುಭವಿಸುವ ಅರ್ಹತೆ ಅವಶ್ಯಕವಾಗಿದೆ.

**ಪ್ರಮುಖ ಪದ:** ಅಸ್ಪೃಶ್ಯ, ವಿದ್ಯಾರ್ಥಿ, ಯುವ ಸಮುದಾಯ.

## ಪರಿಚಯ

[3]ನಮ್ಮ ಸಾಮಾಜಿಕ ಸ್ಥಾನಮಾನವು ಇತರ ಸಮಾಜಗಳಿಗಿಂತ ಭಿನ್ನವಾಗಿದೆ. ಈ ಜಾತಿ ತಾರತಮ್ಯ ಇತರ ಸಮಾಜಗಳಲ್ಲೂ ಇದೆಯಾದರೂ ನಮ್ಮಲ್ಲಿ ವಿಶೇಷವಾದ ಗುಣಭೇದವಿದೆ.ಜಾತಿಭೇದ ಮತ್ತು ಗುಣಭೇದಗಳು ಸಮಾಂತರಗಾಮಿಯಾಗಿವೆ. ಅವು ಇಂದಿಗೂ ಸಮಾನಾಂತರವಾಗಿವೆ. ಬೇರಾವ ದೇಶದಲ್ಲೂ ಇಂಥದ್ದನ್ನು ಕಾಣಲು ಸಾಧ್ಯವಿಲ್ಲ. ಅನಾದಿ ಕಾಲದಿಂದಲೂ ನಾವು ಆನುವಂಶಿಕ ಗುಣಗಳನ್ನು ಒಪ್ಪಿಕೊಂಡಿದ್ದೇವೆ. ಅದರ ದುಷ್ಪರಿಣಾಮಗಳನ್ನು ಅನುಭವಿಸುತ್ತಿದ್ದೇವೆ. ಎಷ್ಟೇ ವಿದ್ಯಾವಂತರಾದರೂ ಅಸ್ಪೃಶ್ಯರು ದೂರವೇ ಇರಬೇಕು. ಆದರೆ ಅಡ್ಡಾಡಿ ಬ್ರಾಹ್ಮಣನು ಎತ್ತರದ ಸ್ಥಾನವನ್ನು ಆಕ್ರಮಿಸಿಕೊಳ್ಳುತ್ತಾನೆ. ನಮ್ಮ ಅಜ್ಞಾನದಿಂದಾಗಿಯೇ ಇದು ಇಲ್ಲಿಯವರೆಗೆ ನಡೆದುಬಂದಿದೆ. ಅಜ್ಞಾನವಿಲ್ಲದಿದ್ದರೆ ಸಮಾನತೆಯ ಹೋರಾಟ ಯಾವತ್ತೋ ಆರಂಭವಾಗಿರುತ್ತಿತ್ತು. ಬ್ರಾಹ್ಮಣನು ಗುಣದಲ್ಲಿ ಕನಿಷ್ಠನಾಗಿದ್ದರೂ ಜನ್ಮದಲ್ಲಿ ಶ್ರೇಷ್ಠನಾಗಿದ್ದಾನೆ.ಗುಣಭೇದದ ಅಂತರ ಮಾಯವಾಗಬೇಕು. ಅದಕ್ಕಾಗಿ ನಾವು ಶಿಕ್ಷಣದ ಪ್ರಸಾರವಾಗಬೇಕು. ನಾವು ತುಂಬಾ ಜಾಗೃತರಾಗಬೇಕು. ಅವಕಾಶವನ್ನು ಪ್ರಾಪ್ತಿಮಾಡಿಕೊಂಡು ನಮ್ಮ ಮಡಿಲಿಗೆ ಹಾಕಿಕೊಳ್ಳುವುದು ನಮ್ಮ ಕೈಯಲ್ಲೇ ಇದೆ. ಶಿಕ್ಷಣವಿಲ್ಲದೆ ಇದು ಸುಲಭಸಾಧ್ಯವಲ್ಲ. ನಮ್ಮ ಹಕ್ಕುಗಳನ್ನು ನಾವೇ ವಶಪಡಿಸಿಕೊಳ್ಳಬೇಕು. ಅದಕ್ಕಾಗಿ ಪ್ರಯತ್ನಿಸಿ ಎಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.ಮತ್ತು ಅದು ತಪ್ಪೆಂದು ನಾನು ಹೇಳಲಾರೆ. ಅಸ್ಪೃಶ್ಯ ಸಮಾಜವು ಸ್ಪೃಶ್ಯ ಸಮಾಜದೊಂದಿಗೆ ಸಹಕಾರದಿಂದ ನಡೆದುಕೊಳ್ಳದೆ ಬೇರೆ ಉಪಾಯವಿಲ್ಲ. ಇಂತಹ ಪ್ರಬಲ ಸಮಾಜದ ಅಸಹಕಾರದ ಮಧ್ಯೆ ನಮ್ಮ ಕಾರ್ಯಸಾಧನೆ ಹೇಗೆ ಸಾಧ್ಯ ಎಂದು ಸಾಕಷ್ಟು ಜನರು ಹೇಳುತ್ತಾರೆ. ಆದರೆ, ಬಹಿಷ್ಕೃತ ವರ್ಗಗಳ ಜನರು ತುಂಬಾ ಮುಖ್ಯವಾಗಿ ಗಮನದಲ್ಲಿಡಬೇಕಾದ ವಿಷಯವೆಂದರೆ, ಸ್ವಾವಲಂಬನೆಯ ದಾರಿಗಳನ್ನು ಕಂಡುಕೊಳ್ಳದ ಹೊರತು ಬೇರಾವ ದಾರಿಗಳೂ ಇಲ್ಲ ಮತ್ತು ಅಂಥ ಪ್ರಯತ್ನಗಳು ವ್ಯರ್ಥವಾಗಲಿವೆ.ಅಸ್ಪೃಶ್ಯ ಸಮಾಜದ ಯಾವುದೇ ವ್ಯಕ್ತಿ, ಆತ ಎಷ್ಟೇ ಸರ್ವಗುಣಸಂಪನ್ನನಾಗಿದ್ದರೂ ಎಷ್ಟೇ ವಿದ್ವಾಂಸನಾಗಿದ್ದರೂ ಆತ ಒಂದು ನಿರ್ದಿಷ್ಟ ಸಮಾಜದಲ್ಲಿ ಹುಟ್ಟಿರುವ ಕಾರಣಕ್ಕಾಗಿ ಅವನಲ್ಲಿರುವ ಗುಣಗಳನ್ನು ಅವಗಣಿಸಲಾಗುತ್ತದೆ. ನಾವು ನಮ್ಮ ಹಕ್ಕುಗಳನ್ನು ಪ್ರತಿಷ್ಠಾಪಿಸುವುದಕ್ಕೆ ಪ್ರಗತಿಯ ಧೋರಣೆಯನ್ನು ಸ್ವೀಕರಿಸಬೇಕು. ಇಲ್ಲವಾದಲ್ಲಿ ಈಗಿರುವ ಸ್ಥಿತಿಯಲ್ಲೇ ಮುಂದುವರೆಯದೆ ಗತ್ಯಂತರವಿಲ್ಲ.ನಮ್ಮ ಮೇಲಿನ ಅನ್ಯಾಯಗಳನ್ನು ದೂರಗೊಳಿಸುವ ಅತ್ಯಂತ ಮಹತ್ವದ ಉಪಾಯವೆಂದರೆ ಸರಕಾರಿ ಅಧಿಕಾರವನ್ನು ಪ್ರಾಪ್ತಿಮಾಡಿಕೊಳ್ಳುವುದು. ನಾವು ಚಾತುರ್ವಣ್ರದ ಹೊರಗಿರಬೇಕೆಂದರೂ ಅಥವಾ ಚಾತುರ್ವಣ್ರವನ್ನು ಮುರಿದು ಒಳನುಗ್ಗಬೇಕೆಂದರೂ ನಮ್ಮ ಬಳಿ ರಾಜಕೀಯ ಅಧಿಕಾರ ಇರಲೇಬೇಕಾಗುತ್ತದೆ. ರಾಜಕೀಯ ಅಧಿಕಾರ ನಮ್ಮ ಕೈಗೆ ಬರುವವರೆಗೆ ನಮ್ಮ ಗೌರವ ಹೆಚ್ಚಾಗದು. ಸಧ್ಯಕ್ಕೆ ಮಹಾರಾಷ್ಟ್ರದಲ್ಲಿ ಬ್ರಾಹ್ಮಣರು ಯಾಕೆ ಪ್ರಭಾವಿಯಾಗಿದ್ದಾರೆ? ಇದಕ್ಕೆ ಬೇರೆ ಬೇರೆ ಕಾರಣಗಳನ್ನು ಕೊಡಬಹುದಾದರೂ ಅವರ ಬಳಿಯಲ್ಲಿ ರಾಜಕೀಯ ಅಧಿಕಾರವೆಂಬ ಪ್ರಬಲ ಅಸ್ತ್ರವಿದೆ ಎಂಬುದನ್ನು ಮರೆಯಲಾಗದು.ಮಹಾರಾಷ್ಟ್ರದಲ್ಲಿ ಬ್ರಾಹ್ಮಣರು ಯಾಕಿಷ್ಟು ಪ್ರಭಾವಿಯಾಗಿದ್ದಾರೆ?ಇದಕ್ಕೆ ಸಂಬಂಧಪಟ್ಟಂತೆ ಐತಿಹಾಸಿಕ ಸಂಗತಿಯೊಂದನ್ನು ಹೇಳುತ್ತೇನೆ.

**ಅಡಿಟಿಪ್ಪಣಿ 3: ಪುಟ, 75, ಡಾ,ಬಾಬಾ ಸಾಹೇಬರ ಪ್ರಸಿದ್ಧ ಭಾಷಣಗಳು,**

ಪೇಶ್ವೆಯ ಪೂರ್ವದಲ್ಲಿ ನನ್ನ ಪ್ರಾಂತ್ಯದಲ್ಲಿದ್ದ ಬಾಳಾಜಿ ವಿಶ್ವನಾಥ ಮತ್ತು ಅವನ ಜಾತಿಬಂಧುಗಳಾದ ಚಿತ್ಪಾವನ ಬ್ರಾಹ್ಮಣರು ಅತ್ಯಂತ ನಿಕೃಷ್ಟಾವಸ್ಥೆಯಲ್ಲಿದ್ದರು. ಆದರೆ ಅವರ ಕೈಗೆ ರಾಜಕೀಯ ಅಧಿಕಾರ ಬರುತ್ತಲೇ ಆ ಸಮಾಜವು ಮಹಾರಾಷ್ಟ್ರದ ಪ್ರಮುಖ ಸ್ಥಾನಗಳನ್ನು ಕಬಳಿಸಿಕೊಂಡಿತು. ಇವತ್ತು ಸರಕಾರಿ ನೌಕರಿಯಿಂದ ಅವರನ್ನು ಶಾಸ್ವತವಾಗಿ ಹೊರದಬ್ಬಿದ್ದಾದರೆ ಅವರ ಪ್ರಭಾವ ಕಿಂಚಿತ್ತೂ ಉಳಿಯಲಾರದು. ಇತರ ಪ್ರಾಂತ್ಯಗಳಲ್ಲಿ ಬ್ರಾಹ್ಮಣರಿಗೆ ಪ್ರಾಮುಖ್ಯತೆಯಿಲ್ಲ. ಗುಜರಾತ್‌ನಲ್ಲಿ ಅವರು ಅಡುಗೆ ಮಾಡುವುದನ್ನು ಬಿಟ್ಟರೆ ಬೇರಾವ ದಾರಿಯಿಲ್ಲ. ಸಂಯುಕ್ತ ಮತ್ತು ಪಂಜಾಬ ಪ್ರಾಂತ್ಯದಲ್ಲಿ ಬ್ರಾಹ್ಮಣರು ಮಹಾರ್, ಮಾಂಗ್ ಜನರಂತೆ ಆಹಾರವನ್ನು ಬೇಡಿ ತಿನ್ನುತ್ತಾರೆ. ಹಕ್ಕುಗಳ ಪ್ರತಿಷ್ಠಾಪನೆಗಾಗಿ ಪ್ರಗತಿಯ ಕೊಂಕಣಸ್ಥ ಬ್ರಾಹ್ಮಣ, ದೇಶಸ್ಥ ಬ್ರಾಹ್ಮಣ, ಸಾರಸ್ವತ ಬ್ರಾಹ್ಮಣ, ಪ್ರಭು ಇತ್ಯಾದಿಯಾಗಿ ಬ್ರಾಹ್ಮಣರ ಸಂಸ್ಥೆಗಳಿವೆ. ತಮ್ಮ ಜಾತಿಯ ವಿದ್ಯಾರ್ಥಿಗಳನ್ನು ವಿದೇಶಗಳಿಗೆ ಕಳುಹಿಸಿ ದೊಡ್ಡ

ಹುದ್ದೆಗಳನ್ನು ಗಿಟ್ಟಿಸಿಕೊಂಡಿದ್ದಾರೆ. ಆ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ತಿಂಗಳಿಗೆ ಒಂದು ರೂಪಾಯಿ ಕೊಡಲು ನಿರ್ಧರಿಸಿದರೆ ವರ್ಷದಲ್ಲಿ ಸಾಕಷ್ಟು ಕೆಲಸ ಮಾಡಬಹುದು. "ಬಾಬಾಸಾಹೇಬರು ಇರುವ ಕಾರಣ ನಾವೇನು ಮಾಡುವುದೇ ಇಲ್ಲ" ಎಂಬಂತೆ ಓಡಿಹೋಗುವುದಲ್ಲ. ನಾನೀಗ ರಾಜಕೀಯದಿಂದ ಹಿಂದೆ ಸರಿಯಲಿದ್ದೇನೆ. ನಿಮ್ಮ ಜೀವನವನ್ನು ನೀವೇ ಬೆಳಗಿಸಬೇಕು.ತ್ಯಾಗ,ಪರಿಶ್ರಮ,ನಿಸ್ವಾರ್ಥದಿಂದ ಒಟ್ಟಾಗಿ ಕೆಲಸ ಮಾಡಬೇಕು. ನನ್ನ ಜೀವಿತಾವಧಿಯಲ್ಲಿಯೇ ನೀವೇನು ಮಾಡುತ್ತೀರೆಂದು ನೋಡೋಣ. ನನ್ನ ಮರಣಾನಂತರ ನೀವು ಒಳ್ಳೆಯದನ್ನು ಮಾಡಿದ್ದೀರೋ ಅಥವಾ ಕೆಟ್ಟದ್ದೋ ಎಂದು ನಾನು ಹೇಗೆ ತಿಳಿಯುವುದು? ಇದನ್ನೇ ನಾನು ನಿಮಗೆ ಹೇಳಲು ಬಯಸುತ್ತೇನೆ.ವ್ಯತಿರಿಕ್ತವಾಗಿ, ಇಂದಿನ ವಿದ್ಯಾರ್ಥಿಗಳು ಫುಟ್ಬಾಲ್, ಕ್ರಿಕೆಟ್, ಪೊಳ್ಳು ರಾಜಕಾರಣದಲ್ಲಿ ಮುಳುಗಿದ್ದಾರೆ. ವಿದ್ಯಾರ್ಜನೆ ಎಂಬುದಕ್ಕೆ ದೊಡ್ಡ ಅರ್ಥವಿದೆ. ನಮ್ಮ ಪ್ರಾಚೀನ ಗುರುಕುಲಗಳು ಏಕಾಂತದಲ್ಲಿ ವಿದ್ಯೆಯನ್ನು ಕಲಿಸುತ್ತಿದ್ದವು. ಅದಕ್ಕೆ ಮುಖ್ಯ ಕಾರಣವೆಂದರೆ, ಅಧ್ಯಯನದ ಮೂಲಕ ಹೊಸ ದೃಷ್ಟಿಯನ್ನು ಪಡೆಯಬೇಕು. ಈ ದೃಷ್ಟಿಕೋನದಿಂದ ಜೀವನದ ನಿಜವಾದ ಮೌಲ್ಯಗಳನ್ನು ಶೋಧಿಸಬೇಕು ಮತ್ತು ಅರ್ಥಮಾಡಿಕೊಳ್ಳಬೇಕು ಎಂಬುದಾಗಿತ್ತು. ಆದರೆ ಇಂದಿನ ವಿದ್ಯಾರ್ಥಿಗಳಿಗೆ ಕ್ರೀಡೆ ಮತ್ತು ರಾಜಕೀಯದ ಬಲೆಯಲ್ಲಿ ಆ ದಿವ್ಯದೃಷ್ಟಿ ಸಿಗುತ್ತಿಲ್ಲ. ವಿದ್ಯಾಲಯಗಳು ತಮ್ಮ ಶುಲ್ಕವನ್ನು ತೀವ್ರವಾಗಿ ಹೆಚ್ಚಿಸಿವೆ. ಈ ಶುಲ್ಕಗಳು ಹೀಗೆಯೇ ಹೆಚ್ಚಾದರೆ ವಿದ್ಯಾರ್ಥಿಗಳ ಮುಂದಿನ ಜೀವನದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದು ಖಂಡಿತ. ಅವರ ಭವಿಷ್ಯವು ಭಯಾನಕವಾಗಿರುತ್ತದೆ. ಕೆಬಾನ್ ಹೇಳುತ್ತಾರೆ. Knowledge is Power (ಜ್ಞಾನ ಶಕ್ತಿ). ವಿದ್ಯಾರ್ಥಿಗಳು ಈ ಜ್ಞಾನವನ್ನು ತೆಗೆದುಕೊಂಡು ತಮ್ಮ ದೇಶವನ್ನು ಅಭಿವೃದ್ಧಿಪಡಿಸಲು ಮತ್ತು ಉಳಿಸಲು ಬಯಸುವುದಾದರೆ, ಅವರು ವಿಶ್ವವಿದ್ಯಾಲಯದ ವ್ಯವಹಾರಗಳತ್ತ ಗಮನ ಹರಿಸಬೇಕು ಮತ್ತು ತಮ್ಮ ಹಕ್ಕುಗಳಿಗಾಗಿ ನಿರಂತರವಾಗಿ ಹೋರಾಡಬೇಕು.ವಿಶ್ವವಿದ್ಯಾಲಯದ ಆಡಳಿತ ನಡೆಸುತ್ತಿರುವ ಸೆನೆಟ್‌ನಲ್ಲಿ ಕುಳಿತಿರುವ ಈ ಕ್ರಿಯಾಶೂನ್ಯ ಮುದುಕರು ಅಲ್ಲಿಂದ ತೊಲಗದ ಹೊರತು ವಿಶ್ವವಿದ್ಯಾಲಯದ ಆಡಳಿತ ಸುಧಾರಿಸುವುದಿಲ್ಲ.ಇವರಿಂದಲೇ ವಿಶ್ವವಿದ್ಯಾಲಯದಲ್ಲಿ ಬಹಿರಂಗ ಭ್ರಷ್ಟಾಚಾರ ನಡೆಯುತ್ತಿದೆ. ಸೆನೆಟ್ ಸದಸ್ಯರ ಒಪ್ಪಿಗೆಯ ಮೇರೆಗೆ ಶೈಕ್ಷಣಿಕ ಸಾಹಿತ್ಯ, ಬೋಧನಾ ಸಾಮಗ್ರಿಗಳು ಅಥವಾ ವೈಜ್ಞಾನಿಕ ಉಪಕರಣಗಳ ಖರೀದಿ ನಡೆಯುತ್ತದೆ, ಹೊಸ ಶಾಲೆ,ಕಾಲೇಜು ಆರಂಭಕ್ಕೆ ಮಂಜೂರಿ ದೊರೆಯುತ್ತದೆ. ಆದ್ದರಿಂದ,ವಿದ್ಯಾರ್ಥಿಗಳು ಸ್ವತಃ ವಿಶ್ವವಿದ್ಯಾಲಯದ ವ್ಯವಹಾರಗಳನ್ನು ಗಮನಿಸಬೇಕು ಮತ್ತು ತಮ್ಮ ಹಿತಾಸಕ್ತಿಗಳನ್ನು ಸಾಧಿಸಬೇಕು.ತಾವು ಕಲಿಯುತ್ತಿರುವುದು ತಮ್ಮ ಬೌದ್ಧಿಕ ವಿಕಾಸಕ್ಕೆ ಪೂರಕವಾಗಿದೆಯೇ ಮತ್ತು ಅವಶ್ಯಕವಾಗಿದೆಯೇ ಎಂಬುದನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ಅವಲೋಕಿಸಬೇಕು. ಅವರ ಭವಿಷ್ಯದ ಜೀವನವು ಈ ಸ್ಥಳದಲ್ಲಿಯೇ ನಿರ್ಮಾಣವಾಗುತ್ತದೆ. ಅವರು ಆದರ್ಶ ವ್ಯಕ್ತಿಯಾಗುವರೋ ಅಥವಾ ಅವರ ಜೀವನ ವಿಫಲವಾಗುವುದೋ ಎಂಬುದು ಶಿಕ್ಷಣಕ್ರಮವನ್ನು ಅವಲಂಬಿಸಿದೆ. ಆದ್ದರಿಂದ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಪ್ರತಿಯೊಂದು ಚಲನವಲನವನ್ನು ಸೂಕ್ಷ್ಮವಾಗಿ ಗಮನಿಸಬೇಕು. ಆದರೆ ಈ ದೃಷ್ಟಿಕೋನದಲ್ಲಿ ಇಂದಿನ ವಿದ್ಯಾರ್ಥಿಗಳು ತೀರಾ ಅಜಾಗರೂಕರಾಗಿದ್ದಾರೆ.

**ಅಡಿಟಿಪ್ಪಣಿ 3: ಪುಟ, 47, ಡಾ,ಬಾಬಾ ಸಾಹೇಬರ ಪ್ರಸಿದ್ಧ ಭಾಷಣಗಳು,**

ಉಚ್ಚಶಿಕ್ಷಣ ಪಡೆಯುವ ವಿದ್ಯಾರ್ಥಿಗಳು ಕಾಲೇಜಿನ ಮೂರು ವರ್ಷಗಳನ್ನು ಪೂರೈಸಿ, ವಿಶ್ವವಿದ್ಯಾಲಯದ ಪದವಿ ತೆಗೆದುಕೊಂಡು ಹೊರಗೆ ಹೋಗುತ್ತಾರೆ. ಆದರೆ ಅವರಿಗೆ ಪ್ಲೇಟೋ, ಬೇಕನ್, ನೀತ್ಸೆ, ಸ್ಪಿನೋಜಾ ಮುಂತಾದ ಮಹಾನ್ ದಾರ್ಶನಿಕರ ತತ್ವಶಾಸ್ತ್ರದ ಮೂಲಭೂತ ಅಂಶಗಳೂ ತಿಳಿದಿಲ್ಲ. ಹೊಸ ಜಗತ್ತನ್ನು ನಿರ್ಮಿಸಿದ ತತ್ವಜ್ಞಾನವನ್ನು ಇಂದಿನ ಪದವೀಧರರು ನಾವು ದೈನಂದಿನ ಜೀವನದಲ್ಲಿ ಉಪೇಕ್ಷಿಸುವುದಕ್ಕಿಂತ ನಾಚಿಕೆಗೇಡಿನ ಸಂಗತಿ ಏನಿದೆ? ಇಂದಿನ ವಿಶ್ವವಿದ್ಯಾಲಯಗಳು ಜೇಮ್ಸ್ ಮತ್ತು ಚಾರ್ಲ್ಸ್ ಅವರ ತತ್ವಜ್ಞಾನವನ್ನು ವಿದ್ಯಾರ್ಥಿಗಳ ಮೇಲೆ ಒತ್ತಾಯದಿಂದ ಹೇರುತ್ತಿವೆ. ವಿದ್ಯಾರ್ಥಿಗಳು ಈ ವಿಷಯಗಳನ್ನು ಸ್ವತಃ ಗುರುತಿಸಬೇಕು ಮತ್ತು ತಮಗೆ ಯೋಗ್ಯ ಶಿಕ್ಷಣ ಬೇಕೆಂದು ಆಗ್ರಹಿಸಬೇಕು.ಮಾನವ ಜೀವನದಲ್ಲಿ ವೈಚಾರಿಕ ಮತ್ತು ನೈತಿಕಮೌಲ್ಯಗಳು ಎಂದಿಗೂ ಸ್ಥಿರವಾಗಿ ಉಳಿದಿಲ್ಲ. ಅವು ಕಾಲಕ್ಕೆ ತಕ್ಕಂತೆ ಬದಲಾಗುತ್ತಲೇ ಇರುತ್ತವೆ.ಬದಲಾಗುವುದು ಮಾತ್ರವಲ್ಲ,ಪ್ರಗತಿಯೂ ಆಗುತ್ತವೆ.ಭಾರತೀಯ ವಿದ್ಯಾರ್ಥಿಗಳು ಈ ಹೊಸದಾಗಿ ಹೊರಹೊಮ್ಮುತ್ತಿರುವ ಜೀವನ ಮೌಲ್ಯಗಳನ್ನು ಸಹ ಗಮನಿಸಬೇಕು ಮತ್ತು ನಾವು ಅವುಗಳನ್ನು ಆಚರಣೆಯಲ್ಲಿ ತರಲು ಸಿದ್ಧರಾಗಿಬೇಕು.ನಮ್ಮ ಶಿಕ್ಷಣ ಸಂಸ್ಥೆಗಳು ಈ ಹೊಸ ತತ್ವಜ್ಞಾನವನ್ನು ತಮ್ಮ ಪಠ್ಯಕ್ರಮದಲ್ಲಿ ಅಳವಡಿಸಿಕೊಂಡಿವೆಯೇ ಎಂಬುದನ್ನು ಸಹ ಗಮನಿಸಬೇಕು.ಆದರೆ ದುಃಖದ ಸಂಗತಿಯೆಂದರೆ, ಆಧುನಿಕ ವಿದ್ಯಾರ್ಥಿಗಳ ಬೌದ್ಧಿಕ ಮತ್ತು ವೈಚಾರಿಕ ಮಟ್ಟವು ಅಧೋಗತಿಗೆ ಹೋಗುತ್ತಿದೆ. ಅದನ್ನು ಭೂತಕಾಲದ ಮಾನವರ ಬುದ್ಧಿವಂತಿಕೆಯೊಂದಿಗೆ ಹೋಲಿಸಲಾಗದು. ಈ ಬೌದ್ಧಿಕ ಮಟ್ಟ ಏಕೆ ಕುಸಿದಿದೆ

ಎನ್ನುವತ್ತ ವಿದ್ಯಾರ್ಥಿಗಳು ಚಿಂತನೆ ನಡೆಸಬೇಕು ಮತ್ತು ಈ ಕುಸಿತದ ಕಾರಣವು ಸಾಕಷ್ಟು ಸ್ಪಷ್ಟವಾಗಿದೆ. ಇಂದಿನ ವಿದ್ಯಾರ್ಥಿಗಳು ಹಿಂದಿನ ಕಾಲದ ಬುದ್ದಿಜೀವಿಗಳ ಮತ್ತು ಮೇಧಾವಿಗಳ ತತ್ವಶಾಸ್ತ್ರ ಮತ್ತು ಸಾಹಿತ್ಯ ಕೃತಿಗಳನ್ನು ಅಧ್ಯಯನ ಮಾಡುವುದಿಲ್ಲ."ನಿಮಗೆ ರಾಜಕೀಯ ಅಧಿಕಾರ ದೊರೆಯದೆ ನಿಮ್ಮ ಸಾಮಾಜಿಕ ಮತ್ತು ಧಾರ್ಮಿಕ ಉದ್ಧಾರ ಸಾಧ್ಯವಿಲ್ಲ ಎಂದು ನಾನು ನಿಮಗೆ ಪದೇಪದೇ ಹೇಳುತ್ತ ಬಂದಿದ್ದೇನೆ.ನಿಮಗೆ ಸಮಾನತೆ ಮತ್ತು ಸ್ವಾತಂತ್ರ್ಯ ಲಭಿಸಬೇಕಾದರೆ,ನೀವು ಗೌರವದಿಂದ ಬದುಕಬೇಕೆಂದರೆ, ನಿಮ್ಮ ಪ್ರಗತಿಯಾಗಬೇಕೆಂದರೆ, ಈ ದೇಶಕ್ಕೆ ಸಿಕ್ಕುವ ರಾಜಕೀಯ ಅಧಿಕಾರದಲ್ಲಿ ನೀವು ಪಾಲುದಾರರಾಗಲೇಬೇಕು. ರಾಜಕೀಯ ಅಧಿಕಾರವು ಒಂದು ಪ್ರಭಾವಿ ಅಸ್ತ್ರವಾಗಿದೆ. ಈ ಅಸ್ತ್ರವನ್ನು ನೀವು ದೇವರೆಂದು ತಿಳಿಯಬೇಕು. ನೀವು ಈ ಅಸ್ತ್ರವನ್ನು ಪೂಜಿಸಬೇಕು. ಅಂದರೆ ನಿಮ್ಮ ಶತೃಗಳ ವಿರುದ್ಧ ಈ ಶಸ್ತ್ರವನ್ನು ಬಳಸಬೇಕು. ರಾಜಕೀಯ ಅಧಿಕಾರವಿಲ್ಲದೆ ನೀವು ಏನನ್ನೂ ಮಾಡಲಾಗದು. ಅದಕ್ಕಾಗಿ ನೀವು ರಾಜಕೀಯ ಅಧಿಕಾರಕ್ಕಾಗಿ ಹೋರಾಟ ಮಾಡಬೇಕು. ಅಧಿಕಾರ ಇಲ್ಲದಿರುವ ಕಾರಣಕ್ಕಾಗಿಯೇ ನೀವು ಸಾವಿರಾರು ವರ್ಷಗಳಿಂದ ಕೊಳಚೆಯಲ್ಲಿ ಬಿದ್ದಿರುವಿರಿ! ಈ ಅಧಿಕಾರ ನಿಮಗೆ ಸಿಗಲೇಬೇಕು. ನಿಮ್ಮ ಶತೃವಿನ ವಿರುದ್ಧ ಬಳಸಲು ರಾಜಕೀಯ ಅಧಿಕಾರವು ಒಂದು ಪ್ರಬಲ ಶಕ್ತಿಯಾಗಿದೆ.ವಿದ್ಯಾರ್ಥಿ ದೆಸೆಯಲ್ಲಿ ವಿದ್ಯಾರ್ಥಿ-ವಿದ್ಯಾರ್ಥಿನಿಯರು ರಾಜಕಾರಣದಲ್ಲಿ ಭಾಗವಹಿಸುವುದು ಸರಿಯಲ್ಲ ಎಂಬುದು ನನ್ನ ಸ್ಪಷ್ಟ ಅಭಿಪ್ರಾಯ. ಅಭ್ಯಾಸವನ್ನು ಬಿಟ್ಟು ರಾಜಕಾರಣದಲ್ಲಿ ಭಾಗವಹಿಸಿದರೆ ಅವರ ಭವಿಷ್ಯಕ್ಕೆ ಹಾನಿಯಿದೆ ಮುಂದೆ ಸಿಗಲಿರುವ ಸ್ವರಾಜ್ಯವು ನಿಮ್ಮ ಪಾಲಿಗೆ ಗುಲಾಮಿ ರಾಜ್ಯವಾಗಲಿದೆ.ನಿಮಗೆ ಸೂಕ್ತ ಮಾರ್ಗದರ್ಶನ ಮಾಡುವ ನನ್ನ ಕರ್ತವ್ಯವನ್ನು ನಿಭಾಯಿಸಿದ್ದೇನೆ. ನಿಮ್ಮ ಕರ್ತವ್ಯವನ್ನು ನೀವು ಎಷ್ಟು ನಿಭಾಯಿಸುವಿರಿ ಎಂದು ನೋಡಬೇಕಿದೆ. ನೀವು ನಿಮ್ಮ ಕರ್ತವ್ಯವನ್ನು ಯೋಗ್ಯ ರೀತಿಯಲ್ಲಿ ನಿಭಾಯಿಸುವಿರೆಂಬ ವಿಶ್ವಾಸ ನನಗಿದೆ.ಸಮಾನ ಘನತೆ ಮತ್ತು ಸಮಾನ ಹಕ್ಕುಗಳ ಪಾಲುದಾರನಾಗಿ, ನೀವು ಹೊಂದಿಸಿದ ಗುರಿಗಳನ್ನು ಸಾಧಿಸಲು ನಾನು ನನ್ನ ಕೈಲಾದಷ್ಟು ಮಾಡುತ್ತೇನೆ ಎಂದು ನಾನು ನಿಮಗೆ ಭರವಸೆ ಕೊಡುತ್ತೇನೆ.ನಿಮ್ಮ ಗುರಿಗಳಿಗಾಗಿ ನಾನು ಹೋರಾಡುತ್ತೇನೆಂಬ ಭರವಸೆ ನೀಡುವ ಅಗತ್ಯವಿಲ್ಲ. ನಮ್ಮ ಹಕ್ಕುಗಳಿಗಾಗಿ ದೃಢವಾಗಿ ನಿಲ್ಲಲು, ನಮ್ಮ ಹಕ್ಕುಗಳಿಗಾಗಿ ಹೋರಾಡಲು ಮತ್ತು ನಿಮ್ಮ ಹಕ್ಕುಗಳನ್ನು ಪಡೆಯುವವರೆಗೂ ಹಿಂದೆ ಸರಿಯದಂತಿರಲು ನಾನು ಶಕ್ತಿ, ಐಕ್ಯತೆ ಮತ್ತು ವಿಶ್ವಾಸವನ್ನು ಬಯಸುತ್ತೇನೆ. ನಿಮ್ಮ ಕರ್ತವ್ಯವನ್ನು ನೀವು ಮಾಡುತ್ತೀರಿ ಎಂದು ನನಗೆ ಭರವಸೆ ನೀಡಿ! ಈ ಹೋರಾಟ ನನಗೆ ಸಂತಸ ತಂದಿದೆ. ಇದು ಭೌತಿಕ ಲಾಭಕ್ಕಾಗಿ ಅಥವಾ ಸ್ವಾರ್ಥಕ್ಕಾಗಿ ನಡೆಯುವ ಹೋರಾಟವಲ್ಲ. ಈ ಹೋರಾಟ ಸಂಪತ್ತು ಅಥವಾ ಅಧಿಕಾರಕ್ಕಾಗಿ ಅಲ್ಲ. ಇದು ನಮ್ಮ ವಿಮೋಚನೆಗಾಗಿ, ಹಿಂದೂ ಸಾಮಾಜಿಕ ವ್ಯವಸ್ಥೆಯಿಂದ ಕತ್ತು ಹಿಸುಕಲ್ಪಟ್ಟ ಮಾನವ ಹಕ್ಕುಗಳ ಮರುಸ್ಥಾಪನೆಗಾಗಿ ನಡೆಯುತ್ತಿರುವ ಹೋರಾಟವಿದು. ನಿಮಗೆ ನನ್ನ ಸಂದೇಶದ ಅಂತಿಮ ಪದಗಳು "ಶಿಕ್ಷಣ, ಜಾಗೃತಿ ಮತ್ತು ಸಂಘಟನೆ". ನಿಮ್ಮ ಸ್ವಂತ ಶಕ್ತಿಯನ್ನು ನಂಬಿರಿ ಮತ್ತು ಎಂದಿಗೂ ಹತಾಶರಾಗಬೇಡಿ. ಶಿಕ್ಷಣದ ಜೊತೆಗೆ ನೈತಿಕತೆಯೂ ಬೇಕು. ಶೀಲವಿಲ್ಲದ ವಿದ್ಯೆ ಅರ್ಥವಿಲ್ಲದ್ದು, ಏಕೆಂದರೆ ಜ್ಞಾನವೇ ಒಂದು ಆಯುಧ. ಸದ್ಗುಣಿಯು ಜ್ಞಾನವೆಂಬ ಅಸ್ತ್ರದಿಂದ ಯಾರನ್ನು ಬೇಕಾದರೂ ರಕ್ಷಿಸುತ್ತಾನೆ. ಸದ್ಗುಣವಿಲ್ಲದಿದ್ದರೆ ಯಾರನ್ನಾದರೂ ವಂಚಿಸಿ ಅದೇ ಅಸ್ತ್ರದಿಂದಲೇ ಕೊಲ್ಲುತ್ತಾನೆ. ಜ್ಞಾನವು ಕತ್ತಿಯಿದ್ದಂತೆ. ಅದರ ಪ್ರಾಮುಖ್ಯತೆಯು ಧರಿಸುವವರ ಮೇಲೆ ಅವಲಂಬಿತವಾಗಿರುತ್ತದೆ. ಸುಳ್ಳು ಹೇಳಲು ಸಹ ಬುದ್ಧಿವಂತಿಕೆ ಮತ್ತು ಚಾಣಾಕ್ಷತನ ಬೇಕು ಎಂಬುದನ್ನು ನಾವು ತಿಳಿದಿರಬೇಕು. ಬುದ್ಧಿವಂತಿಕೆಯನ್ನು ಸದ್ಗುಣದೊಂದಿಗೆ ಸಂಯೋಜಿಸಿದರೆ ಶೀಲವಾಗುತ್ತದೆ. ಆಗ ಅವನು ಮೋಸ ಮಾಡಲಾರನು. ಆದ್ದರಿಂದ ವಿದ್ಯಾವಂತ ಜನರಲ್ಲಿ ಶೀಲವು ಬಹಳ ಮುಖ್ಯವಾಗಿದೆ. ವಿದ್ಯಾವಂತರು ಶೀಲವಿಲ್ಲದೆ ಬದುಕಲು ಪ್ರಾರಂಭಿಸಿದರೆ ಅವರ ಶಿಕ್ಷಣದಲ್ಲಿ ಸಮಾಜ ಮತ್ತು ರಾಷ್ಟವು ನಾಶವಾಗುತ್ತದೆ. ವಿದ್ಯೆಗಿಂತ ಶೀಲ ಎಷ್ಟು ಅಮೂಲ್ಯ ಎಂಬುದು ನಿಮಗೆ ತಿಳಿದಿರಬೇಕು.

ಅಡಿಟಿಪ್ಪಣಿ 3: ಪುಟ, 38, ಡಾ.ಬಾಬಾ ಸಾಹೇಬರ ಪ್ರಸಿದ್ಧ ಭಾಷಣಗಳು,

## ಉಲ್ಲೇಖ ಗ್ರಂಥಸೂಚಿ


1. ಬಂಜಗೆರೆ ಜಯಪ್ರಕಾಶ್, 2023, ಬೇಗಂಪುರ (ಅನು)-,ಜೀರುಂಡೆ ಪ್ರಕಾಶನ,ಬೆಂಗಳೂರು,
2. ವಿಕಾಸ್ ಆರ್ ಮೌರ್ಯ.2023, ಅಂಬೇಡ್ಕರ್ ಜಗತ್ತು (ಅನು)-. ಜೀರುಂಡೆ ಪ್ರಕಾಶನ,ಬೆಂಗಳೂರು,
3. ಮೂಡ್ನಕೂಡು ಚಿನ್ನಸ್ವಾಮಿ, 2018, ಬಹುತ್ವದ ಭಾರತ ಮತ್ತು ಬೌದ್ಧ ತಾತ್ವಿಕತೆ ಪ್ರಬಂಧಗಳು-ಲಡಾಯಿ ಪ್ರಕಾಶನ.ಗದಗ.
4. ಮೊಗಳ್ಳಿ ಗಣೇಶ್, 2018 ಅಂಬೇಡ್ಕರ್ ಎಂಬ ಮಹಾ ನದಿ ಮತ್ತು ದಲಿತೀಕರಣಗೊಂಡ ಗಾಂಧೀಜಿ-ಲಡಾಯಿ ಪ್ರಕಾಶನ.ಗದಗ.
5. ಅನಿಲ ಹೊಸಮನಿ,(ಅನು)ಶಿಕ್ಷಣ,ವಿದ್ಯಾರ್ಥಿ,ಯುವಜನ,ಡಾ,ಬ ಾಬಾ ಸಾಹೇಬರ ಪ್ರಸಿದ್ಧ ಭಾಷಣಗಳು,ಲಡಾಯಿಪ್ರಕಾಶನ,ಗದಗ